ಅಂತಾರಾಷ್ಟ್ರೀಯ ಸಮ್ಮೇಳನ ನಾಡಿದ್ದು

ಹುಬ್ಬಳ್ಳಿ: ಇಲ್ಲಿಯ ಚೇತನ್ ಬಿಜಿನೆಸ್ ಸ್ಕೂಲ್, ಭಾರತೀಯ ನಿರ್ವಹಣಾ ಶಾಲೆಗಳ ಸಂಘ (ಎಐಎಂಎಸ್) ಕರ್ನಾಟಕ- ಕೇರಳ ಅಧ್ಯಾಯದ ಸಹಯೋಗದಲ್ಲಿ ಅ. 30ರಂದು ಸಮಕಾಲೀನ ನಿರ್ವಹಣಾ ಪ್ರಕರಣಗಳು (ಕಂಟೆಂಪರರಿ ಮ್ಯಾನೇಜಮೆಂಟ್ ಕೇಸಸ್) ಕುರಿತ ಒಂದು ದಿನದ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿದೆ. ಯೋಚಿಸಿ, ವಿಶ್ಲೇಷಿಸಿ, ನಾವೀನ್ಯ ತನ್ನಿ, ರೂಪಾಂತರಿಸಿ (ಥಿಂಕ್, ಎನಲೈಜ್, ಇನ್ನೋವೇಟ್, ಟ್ರಾನ್ಸ್‌ಫಾರ್ಮ್) ಎಂಬ ಧ್ಯೇಯದೊಂದಿಗೆ ನಡೆಯಲಿರುವ ಸಮ್ಮೇಳನವು ಮೂಲ ಬೋಧನಾ ಪ್ರಕರಣಗಳನ್ನು ಮಂಡಿಸಲು ಅಧ್ಯಾಪಕರಿಗೆ ಮತ್ತು ಸಂಶೋಧಕರಿಗೆ ವೇದಿಕೆ ಕಲ್ಪಿಸುತ್ತದೆ. ಪ್ರಕರಣಗಳನ್ನು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಮಂಡಿಸಬಹುದಾಗಿದ್ದು, ದೇಶ-ವಿದೇಶಗಳ ಪ್ರತಿನಿಧಿಗಳು ಭಾಗವಹಿಸುವ ಅವಕಾಶವಿದೆ. ಅಧ್ಯಾಪಕರಲ್ಲಿ ನಿರ್ವಹಣಾ ಪ್ರಕರಣ ಬರವಣಿಗೆ ಉತ್ತೇಜಿಸುವುದು, ಪ್ರಕರಣಗಳನ್ನು ಮಂಡಿಸಲು ವೇದಿಕೆ ಒದಗಿಸುವುದು, ಗುಣಮಟ್ಟದ ಪ್ರಕರಣಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುವುದು ಸಮ್ಮೇಳನದ ಉದ್ದೇಶವಾಗಿದೆ. ವಿಜೇತರಿಗೆ ಡಿಜಿಟಲ್ ಶ್ರೇಷ್ಠತಾ ಪ್ರಮಾಣಪತ್ರ ನೀಡಲಾಗುವುದು. ಬೆಳಗ್ಗೆ 10ಕ್ಕೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕೌಶಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ನಿರ್ದೇಶಕ ಡಾ. ಉತ್ತಮ್ ಕಿನಂಗೆ ಸಮ್ಮೇಳನ ಉದ್ಘಾಟಿಸುವರು. ಸಂಜೆ 5ಕ್ಕೆ ಸಮಾರೋಪ, ಪ್ರಶಸ್ತಿ ಮತ್ತು ಪ್ರಮಾಣಪತ್ರ ವಿತರಣೆ ನಡೆಯಲಿದೆ.

ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರ । ಮಂದಗತಿಯಲ್ಲಿ ನಡೆದ ಮತ ಎಣಿಕೆ

ಬಿಜೆಪಿಯ ಸಂಕನೂರಗೆ ಭರ್ಜರಿ ಮುನ್ನಡೆ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಹಾಲಿ ಎಂಎಲ್‌ಸಿ ಬಿಜೆಪಿಯ ಎಸ್.ವಿ. ಸಂಕನೂರ ಮುನ್ನಡೆ ಸಾಧಿಸಿದ್ದಾರೆ. ನಗರದ ಕೃಷಿ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಪ್ರಕ್ರಿಯೆ ಆರಂಭವಾಯಿತು. ತಡರಾತ್ರಿ ನಾಲ್ಕನೇ ಸುತ್ತಿನ ಎಣಿಕೆ ಮುಗಿದಾಗ ಬಿಜೆಪಿ ಸಂಕನೂರ ಅವರು ಕಾಂಗ್ರೆಸ್‌ನ ಮೋಹನ ಲಿಂಬಿಕಾಯಿ ಅವರಿಗಿಂತ 7774 ಮತಗಳ ಮುನ್ನಡೆ ಸಾಧಿಸಿದ್ದರು. ಸಂಕನೂರ 25338, ಲೊಂಬಿಕಾಯಿ 18596ಮತ ಪಡೆದಿದ್ದರು.



ಮೋಹನ ಲಿಂಬಿಕಾಯಿ

ಪ್ರತಿ ಸುತ್ತಿಗೆ 14 ಸಾವಿರ ಮತ ಎಣಿಕೆ ನಡೆಯಿತು (ಒಟ್ಟು 5 ಸುತ್ತು). ಮೊದಲ ಸುತ್ತಿನಲ್ಲಿ ಸಂಕನೂರ 6459 ಮತ ಪಡೆದರು. ಕಾಂಗ್ರೆಸ್‌ನ ಮೋಹನ ಲಿಂಬಿಕಾಯಿ 4394 ಮತ ಪಡೆದು 2065 ಮತಗಳ ಹಿನ್ನಡೆ ಅನುಭವಿಸಿದರು. 2ನೇ ಸುತ್ತಿನಲ್ಲಿ ಸಂಕನೂರ 6161 ಮತ, ಲಿಂಬಿಕಾಯಿ 4697 ಮತ ಪಡೆದರು. 3ನೇ ಸುತ್ತಿನಲ್ಲಿ ಸಂಕನೂರ 6191 ಮತ ಪಡೆದರೆ, ಲಿಂಬಿಕಾಯಿ 4791 ಮತ ಪಡೆದರು. 4ನೇ ಸುತ್ತಿನಲ್ಲಿ ಸಂಕನೂರ 6527 ಮತ ಪಡೆದರೆ, ಲಿಂಬಿಕಾಯಿ 4714 ಮತಪಡೆದು 1813 ಮತಗಳ ಹಿನ್ನಡೆ ಅನುಭವಿಸಿದರು. ಒಟ್ಟು 73,658 ಮತಗಳು ಚಲಾವಣೆಯಾಗಿದ್ದವು.



ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯ ಮತ ಎಣಿಕೆಯ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಸಂಕನೂರ ಅವರು ನಾಲ್ಕು ಸುತ್ತುಗಳಲ್ಲಿ ಮುನ್ನಡೆ ಕಾಯ್ದುಕೊಂಡಿದ್ದರಿಂದ ಪಕ್ಷದ ಕಾರ್ಯಕರ್ತರು ಸಂಭ್ರಮಿಸಿದರು.

ಬಿಜೆಪಿ ಕಾರ್ಯಕರ್ತರ ಸಂಭ್ರಮ: ನಾಲ್ಕು ಸುತ್ತುಗಳ ಮತ ಎಣಿಕೆ ಮುಗಿಯುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಕೃಷಿ ವಿಶ್ವವಿದ್ಯಾಲಯದ ಮುಖ್ಯ ದ್ವಾರದ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮಾರ್ಕ್ ಮತ್ತು ಬೈಗುಳ

ಪ್ರಜ್ಞಾವಂತ ಪದವೀಧರರು ಮತದಾರರಾಗಿರುವ ಕ್ಷೇತ್ರದಲ್ಲಿ 3 ಸುತ್ತುಗಳಲ್ಲಿ ಕುಲಗೆಟ್ಟ ಮತಗಳ ಸಂಖ್ಯೆ ಹೆಚ್ಚಾಗಿತ್ತು. ಮೊದಲ ಸುತ್ತಿನಲ್ಲಿ 2133, ಎರಡನೇ ಸುತ್ತಿನಲ್ಲಿ 1939, ಮೂರನೇ ಸುತ್ತಿನಲ್ಲಿ 1889 ಮತ ಸೇರಿ 5961 ಮತಗಳು ಅಸಿಂಧುವಾದವು. ಅಭ್ಯರ್ಥಿಯ ಹೆಸರಿನ ಮುಂದೆ ಪಾಸ್ ಮಾರ್ಕ್ ಸೇರಿ ಬೈಗುಳ ಬರೆದಿರುವುದು ಕಂಡುಬಂತು.

ಜನಜಾಗೃತಿ ವಾಕಥಾನ್ ನಾಳೆ

ಹುಬ್ಬಳ್ಳಿ: ವಿಶ್ವ ಪಾರ್ಶ್ವವಾಯು ದಿನ ಅಂಗವಾಗಿ ಬಾಲಾಜಿ ಆಸ್ಪತ್ರೆ ವತಿಯಿಂದ ಅ. 29ರಂದು ಜನಜಾಗೃತಿ ವಾಕಥಾನ್ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 8 ಗಂಟೆಗೆ ಬಾಲಾಜಿ ಆಸ್ಪತ್ರೆ ಚೇರ್ಮನ್ ಡಾ. ಕ್ರಾಂತಿಕಿರಣ ನೇತೃತ್ವದಲ್ಲಿ ಆಸ್ಪತ್ರೆ ಆವರಣದಿಂದ ಹೊರಡುವ ವಾಕಥಾನ್‌ದಲ್ಲಿ ಗಣ್ಯರು ಹಾಗೂ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಆಸ್ಪತ್ರೆ ಆವರಣದಿಂದ ಆರಂಭಗೊಂಡು ಕೋರ್ಟ್ ಮುಂಭಾಗದಿಂದ ಶಿರೂರ ಪಾರ್ಕ್ ಸರ್ಕಲ್, ಆರ್ಟ್ಸ್ ಕಾಲೇಜು, ಕೆಎಂಸಿಆರ್‌ಐ, ಎಂ.ವಿ.ಪಿ ಎದುರಿನ ವಿದ್ಯಾನಗರ ತಿಮ್ಮಸಾಗರ ರಸ್ತೆ ಮುಖಾಂತರ ಸಾಗಿ ಪುನಃ ಆಸ್ಪತ್ರೆ ಆವರಣದಲ್ಲಿ ಸಮಾಪ್ತಿಗೊಳ್ಳಲಿದೆ. ವಾಕಥಾನ್‌ನಲ್ಲಿ ಸಾರ್ವಜನಿಕರೂ ಪಾಲ್ಗೊಳ್ಳಲು ಮುಕ್ತ ಅವಕಾಶವಿದೆ.



ಹುಬ್ಬಳ್ಳಿಯ ಎಸ್‌ಜೆಆರ್‌ವಿಪಿ ಮಂಡಳಿಯ ಶಾಂತಿನಿಕೇತನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಂಗಳವಾರ ಅಜ್ಜ- ಅಜ್ಜಿಯರ ದಿನ ಆಚರಿಸಲಾಯಿತು. ಭವರಲಾಲ್ ಸಿ. ಜೈನ್, ಎಂ. ವಿಜಯಲಕ್ಷ್ಮೀ, ಬಸವರಾಜ ಶೆಟ್ಟರ್, ಪವನ ಬಾಫಣಾ, ಭಾವನಾ ಬಾಫಣಾ ಇದ್ದರು.

ಶಾಂತಿನಿಕೇತನದಲ್ಲಿ ಅಜ್ಜ-ಅಜ್ಜಿಯರ ದಿನ

ಹುಬ್ಬಳ್ಳಿ: ಇಲ್ಲಿಯ ಎಸ್‌ಜೆಆರ್‌ವಿಪಿ ಮಂಡಳಿಯ ಶಾಂತಿನಿಕೇತನ ಆಂಗ್ಲ ಮಾಧ್ಯಮ ಶಾಲೆಯಲ್ಲಿ (ಸಿಬಿಎಸ್‌ಇ) ಕಿಂಡರ್ ಗಾರ್ಟನ್ ವಿಭಾಗದಿಂದ ಮಂಗಳವಾರ ಅಜ್ಜ- ಅಜ್ಜಿಯರ ದಿನ ಆಚರಿಸಲಾಯಿತು. ಅತ್ಯಂತ ಸಂತೋಷ, ಪ್ರೀತಿ ಮತ್ತು ಉತ್ಸಾಹದಿಂದ ಮಕ್ಕಳು, ಪಾಲಕರು, ಅಜ್ಜ-ಅಜ್ಜಿಯರು ಪಾಲ್ಗೊಂಡರು. ಶಾಲೆಯ ಅಧ್ಯಕ್ಷ ಭವರಲಾಲ್ ಸಿ. ಜೈನ್, ಪ್ರಾಚಾರ್ಯ ಎಂ. ವಿಜಯಲಕ್ಷ್ಮಿ ಮತ್ತು ಆಡಳಿತಾಧಿಕಾರಿ ಬಸವರಾಜ ಶೆಟ್ಟರ್, ಪಾಲಕರಾದ ಪವನ ಬಾಫಣಾ, ಭಾವನಾ ಬಾಫಣಾ, ಕಲಾವತಿ ಕೊತ್ತಂಬರಿ, ಕಸ್ತೂರವ್ವಾ ಅಣ್ಣಿಗೇರಿ, ಶಂಕರಪ್ಪ ದುಮ್ಮನ್ನವರ, ಗಂಗಮ್ಮಾ ದುಮ್ಮನ್ನವರ ಮೊದಲಾದವರು ಉಪಸ್ಥಿತರಿದ್ದರು. ಕಿಂಡರ್ ಗಾರ್ಟನ್ ವಿದ್ಯಾರ್ಥಿಗಳು ತಮ್ಮ ಅಜ್ಜ ಅಜ್ಜಿಯರ ಮೇಲಿನ ಪ್ರೀತಿ ಮತ್ತು ವಾತ್ಸಲ್ಯ ವ್ಯಕ್ತಪಡಿಸಲು ವೇದಿಕೆಯಾಯಿತು. ಆಡಳಿತ ಮಂಡಳಿ, ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗದ ಪ್ರಯತ್ನವನ್ನು ಪ್ರಶಂಸಿಸಲಾಯಿತು.



ಹುಬ್ಬಳ್ಳಿಯಲ್ಲಿ ಕೆನರಾ ಬ್ಯಾಂಕ್ ಏರ್ಪಡಿಸಿದ್ದ ಕೆನರಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಟ್ರೋಫಿ ಪಡೆದ ಚಿಕ್ಕೋಡಿ ಚಾಂಪಿಯನ್ಸ್ ತಂಡ.

ಟ್ರೋಫಿ ಗೆದ್ದ ಚಿಕ್ಕೋಡಿ ಚಾಂಪಿಯನ್ಸ್

ಹುಬ್ಬಳ್ಳಿ: ನಗರದಲ್ಲಿ ಕೆನರಾ ಬ್ಯಾಂಕ್ ಹುಬ್ಬಳ್ಳಿ ವೃತ್ತ ಕಚೇರಿ ವತಿಯಿಂದ ಏರ್ಪಡಿಸಿದ್ದ ಕೆನರಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಿಕ್ಕೋಡಿ ಚಾಂಪಿಯನ್ಸ್ ತಂಡವು ಟ್ರೋಫಿ ತನ್ನದಾಗಿಸಿಕೊಂಡಿದೆ. ಕರ್ನಾಟಕ ಜಿಮ್ಖಾನಾ ಮೈದಾನ, ಬಿವಿಬಿ ಮೈದಾನದಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬ್ಯಾಂಕ್‌ನ ವಿವಿಧ ಪ್ರದೇಶಗಳನ್ನು ಪ್ರತಿನಿಧಿಸುವ ಒಂಬತ್ತು ತಂಡಗಳು ಪಾಲ್ಗೊಂಡಿದ್ದವು. ವೃತ್ತ ಕಚೇರಿಯ ಮುಖ್ಯಸ್ಥರು ಮತ್ತು ಪ್ರಧಾನ ವ್ಯವಸ್ಥಾಪಕ ಕೆ. ವೀರೇಂದ್ರ ಬಾಬು ಅವರ ಮಾರ್ಗದರ್ಶನ ಮತ್ತು ನೇತೃತ್ವದಲ್ಲಿ ಪಂದ್ಯಾವಳಿ ನಡೆಯಿತು. ಉಪ ಪ್ರಧಾನ ವ್ಯವಸ್ಥಾಪಕರಾದ ಜಗದೀಶ ಸ್ವಾಮಿ ಮತ್ತು ಎನ್. ಬೆಹೆರಾ ಅವರು ಪಂದ್ಯಾವಳಿ ಉದ್ಘಾಟಿಸಿದರು. ಡಿಜಿಎಂ ರಾಜೀವ್ ಕುಮಾರ್ ಪಾಂಡೆ ಉಪಸ್ಥಿತರಿದ್ದರು. ಬ್ಯಾಂಕ್ ಉದ್ಯೋಗಿಗಳ ನಡುವೆ ಕ್ರೀಡಾ ಮನೋಭಾವ, ತಂಡದ ಸಹಕಾರ, ಸೌಹಾರ್ದ ಮತ್ತು ಆರೋಗ್ಯಕರ ಕೆಲಸ, ಸಮತೋಲನವನ್ನು ಉತ್ತೇಜಿಸುವ ಉದ್ದೇಶದಿಂದ ಪಂದ್ಯಾವಳಿ ಏರ್ಪಡಿಸಲಾಗಿತ್ತು ಎಂದರು. ವಿವಿಧ ಪ್ರದೇಶಗಳ ಸಹದ್ಯೋಗಿಗಳು ಪರಸ್ಪರ ಸಂವಹನ ನಡೆಸಲು, ವೃತ್ತಿಪರ ಸಂಬಂಧಗಳನ್ನು ಬಲಪಡಿಸಲು ಮತ್ತು ಒಗ್ಗಟ್ಟಿನ ಭಾವನೆ ಬೆಳೆಸಿಕೊಳ್ಳಲು ಕಾರ್ಯಕ್ರಮವು ಅವಕಾಶವನ್ನು ಒದಗಿಸಿತು. ಚಿಕ್ಕೋಡಿ ಚಾಂಪಿಯನ್ಸ್ ತಂಡ ವಿಜೇತರಾದರೆ, ಕಲಬುರಗಿ ಕಿಂಗ್ಸ್ ತಂಡ ರನ್ನರ್‌ಅಪ್ ಸ್ಥಾನ ಪಡೆದುಕೊಂಡಿತು.

ಕೌಶಲ ತರಬೇತಿಗೆ ಅರ್ಜಿ ಆಹ್ವಾನ

ಧಾರವಾಡ: ಯುವನಿಧಿ ಯೋಜನೆಯ ಫಲಾನುಭವಿ ಯುವಕ-ಯುವತಿಯರಿಗೆ ಕೌಶಲ ತರಬೇತಿ ನೀಡಿ ಉದ್ಯೋಗ ಕಲ್ಪಿಸಲು ಸರ್ಕಾರ ರೂಪಿಸಿರುವ 'ಯುವನಿಧಿ ಪ್ಲಸ್' ಕಾರ್ಯಕ್ರಮದಡಿ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಹುಬ್ಬಳ್ಳಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಐ)ದಲ್ಲಿ ತರಬೇತಿ ನೀಡಲಾಗುವುದು. ಅಕೌಂಟ್ಸ್ ಎಕ್ಸಿಕ್ಯೂಟಿವ್, ಡಿಜಿಟಲ್ ಮಾರ್ಕೆಟಿಂಗ್, ಸೇಲ್ಸ್ ಎಕ್ಸಿಕ್ಯೂಟಿವ್ ವೃತ್ತಿಗಳ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗುವುದು. ತರಬೇತಿ ನ.2ರಿಂದ ಆರಂಭವಾಗಲಿದ್ದು, ಅ.30ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ಜಿಟಿಟಿಐ ಸಂಪರ್ಕಿಸಬೇಕು.

ಧಾರವಾಡ ಕ್ರೀಡಾಂಗಣ ಅಭಿವೃದ್ಧಿ ಪರಿಶೀಲನೆ

ಧಾರವಾಡ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನರಾಜ್ ಸಿಂಗ್ ಅವರು ಜಿಲ್ಲೆಗೆ ಭೇಟಿ ನೀಡಿ ಸೋಮವಾರ ಕ್ರೀಡಾಂಗಣಗಳ ಕಾಮಗಾರಿ ಪರಿಶೀಲಿಸಿದರು.

ಜಿಲ್ಲೆಯಲ್ಲಿ ನೂತನವಾಗಿ ನಿರ್ಮಿಸಲಾದ ಅಂತಾರಾಷ್ಟ್ರೀಯ ಮಟ್ಟದ ಈಜುಕೊಳ ಹಾಗೂ ಒಳಾಂಗಣ ಕ್ರೀಡಾಂಗಣವನ್ನು ವೀಕ್ಷಿಸಿದ ಅವರು, ನಿರ್ಮಾಣ ಏಜೆನ್ಸಿಯವರೊಂದಿಗೆ ಯೋಜನಾ ವರದಿ, ನೀಲಿನಕ್ಷೆ ಪರಿಶೀಲಿಸಿ ಚರ್ಚಿಸಿದರು. ಕೆಲವು ಮಾರ್ಪಾಡು ಮಾಡಲು ಸೂಚಿಸಿದರು. ಜಿಲ್ಲಾ ಕ್ರೀಡಾಂಗಣದ ಒಳಾಂಗಣ ಕ್ರೀಡಾಂಗಣ ಬಹಳ ಹಳೆಯದಾಗಿದ್ದು, ಅಲ್ಲಿಯೂ ಮಾರ್ಪಾಡು ಮಾಡುವಂತೆ ಸೂಚಿಸಿ, ಎಲ್ಲ ಕಾಮಗಾರಿಗಳ ಅಂದಾಜು ವೆಚ್ಚದ ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸದಾನಂದ ಅಮರಾಪೂರ, ಕ್ರೀಡಾಂಗಣದಲ್ಲಿ ಕುಸ್ತಿ ಮತ್ತು ಜಿಮ್ ಹಾಲ್ ನಿರ್ಮಾಣಕ್ಕೆ ಅನುದಾನ ಕೊರತೆಯಿದ್ದು, ಹೆಚ್ಚಿನ ಅನುದಾನ ಹಾಗೂ ಜಿಲ್ಲಾ ಕ್ರೀಡಾಂಗಣದ ಸುತ್ತಲಿನ ಪ್ರೇಕ್ಷಕರ ಗ್ಯಾಲರಿ ಮತ್ತು ಹಾಳಾಗಿರುವ ಸಿಂಥೆಟಿಕ್ ಅಥ್ಲೆಟಿಕ್ಸ್ ಟ್ರ್ಯಾಕ್ ನೂತನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಹುಬ್ಬಳ್ಳಿಯ ಉಣಕಲ್ಲ ಸಾಯಿ ನಗರದಲ್ಲಿರುವ 1 ಎಕರೆ 32 ಗುಂಟೆ ಖಾಲಿ ನಿವೇಶನವನ್ನು ಕ್ರೀಡಾ ಚಟುವಟಿಕೆಗೆ ಬಳಸಲು ಇಲಾಖೆಗೆ ಹಸ್ತಾಂತರಿಸುವಂತೆ ಕೋರಿದರು. ನವೀನ ರಾಜ್ ಅವರು, ಹುಬ್ಬಳ್ಳಿ ಲೋಹಿಯಾ ನಗರದಲ್ಲಿ ಖೇಲೋ ಇಂಡಿಯಾ ಮತ್ತು ಸ್ಮಾರ್ಟ್‌ಸಿಟಿ ಯೋಜನೆಯಡಿ ಅಂದಾಜು 175 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಕ್ರೀಡಾ ಸಂಕೀರ್ಣವನ್ನು ವೀಕ್ಷಿಸಿದ ಬಳಿಕ, ಶಾಸಕ ಅರವಿಂದ ಬೆಲ್ಲದ ಅವರೊಂದಿಗೆ ಉದ್ಘಾಟನೆ ಮತ್ತು ನಿರ್ವಹಣೆ ಗುತ್ತಿಗೆ ಬಗ್ಗೆ ಚರ್ಚಿಸಿದರು. ಜಿಲ್ಲಾಧಿಕಾರಿ ಸ್ನೇಹಲ್ ಆರ್., ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ್ ಘಾಳಿ, ಸಹಾಯಕ ಇಂಜಿನಿಯರ್ ಬಸವರಾಜ ಇದ್ದರು.



ಧಾರವಾಡದಲ್ಲಿ ನಿರ್ಮಿಸಿದ ಈಜುಕೊಳ ಹಾಗೂ ಒಳಾಂಗಣ ಕ್ರೀಡಾಂಗಣವನ್ನು ನವೀನರಾಜ್ ಸಿಂಗ್ ಸೋಮವಾರ ಪರಿಶೀಲಿಸಿದರು. ಸ್ನೇಹಲ್ ಆರ್., ಸದಾನಂದ ಅಮರಾಪುರ ಇತರರಿದ್ದರು.

ಸಾರ್ವಜನಿಕ ನೋಟಿಸು

ನನ್ನ ಪಕ್ಷಗಾರರು, ಧಾರವಾಡ ಜಿಲ್ಲಾ, ಹುಬ್ಬಳ್ಳಿ ತಾಲೂಕು, ಶಿರಗುಪ್ಪಿ ಹೋಬಳಿ, ಮಂಟೂರ ಗ್ರಾಮದ ಸರ್ವೆ/ಬ್ಲಾಕ್ ನಂ.122 ಹಿಸ್ಸಾ 2, ಕ್ಷೇತ್ರ 02 ಎಕರೆ 17 ಗುಂಟೆ ಹಳೇಶರ್ತು ಆದ ಯರಿ ಜಮೀನನ್ನು ಅದರ ಮಾಲೀಕರಾದ **ಶ್ರೀ ಡಿ.ಎ.ಡಿ.ವಿ.ಪ್ರಸಾದ ದಾಸರಿ ಸೊಲೊಮನ್ ತಂದೆ ದಾಸರಿ ಸೊಲೊಮನ್** ಇವರಿಂದ ಖರೀದಿಸುವವರಿದ್ದು, ಕಾರಣ, ಸದರ ಮೇಲ್ಕಂಡ ಜಮೀನಿನ ಕುರಿತಂತೆ ಯಾರದಾದರೂ ಹಕ್ಕು, ಹಿತಸಂಬಂಧ, ತಂಟೆ, ತಕರಾರು, ಬೋಜಾ, ಇತ್ಯಾದಿ ಏನಾದರೂ ಇದ್ದಲ್ಲಿ, ಈ ನೋಟಿಸು ಪ್ರಕಟಣೆಯ ಏಳು (7) ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಒಂದೊಮ್ಮೆ ಸದರ ಅವಧಿಯಲ್ಲಿ ಯಾವುದೇ ತಕರಾರುಗಳು ಬಾರದೇ ಇದ್ದಲ್ಲಿ, ಮುಂದೆ ನಮ್ಮ ಪಕ್ಷಗಾರರು ಖರೀದಿಪತ್ರವನ್ನು ನೋಂದಾಯಿಸಿ ಕೊಳ್ಳುವವರಿದ್ದು ನಂತರ ಬಂದ ತಕರಾರುಗಳು ನನ್ನ ಪಕ್ಷಗಾರರಿಗೆ ಬಾಂಧಾಯಿಸುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಮೂರ್ತಿ ಆರ್. ಹೆಗಡೆ, ವಕೀಲರು
ನಂ. 15 & 16, 2ನೇ ಮಹಡಿ, ಶ್ರೀದೇವಿಲಕ್ಷ್ಮಿ, ಬ್ಯುಸಿನೆಸ್ ಸೆಂಟರ್, ಕಲ್ಯಾಣ ಲೇಔಟ್, ಹುಬ್ಬಳ್ಳಿ ಮೊ : 9448560654
27-10-2026

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ಪ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ,

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಸ.ರ. ಹದ್ದಿಯ ಪೈಕಿ ಕೃಷ್ಣಾಪೂರ ಗ್ರಾಮದ ಹದ್ದಿಯ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹದ್ದಿಗೆ ಸೇರಿದ ಹುಬ್ಬಳ್ಳಿ ಶಹರ ಹಳೇಹುಬ್ಬಳ್ಳಿ ಆರ್ ಎನ್ ಶೆಟ್ಟಿ ರೋಡ ಬ್ಯಾಂಕರ್ಸ ಕಾಲೋನಿಯಲ್ಲಿರುವ ಆಸ್ತಿ ಇದರ ಸಿಟಿಎಸ್ ನಂ. 4954/ಎ/1ಎ/2/6, ವಾರ್ಡ ನಂಬರ ಎಕ್ಸಟೆನ್ಷನ್ ಇದರ ಒಟ್ಟು ಕ್ಷೇತ್ರ 139. 45 ಚ. ಮೀ. ಇದ್ದು, ಇದರ ಇ-ಸ್ವತ್ತಿನ ಸಂಖ್ಯೆ 2732306769, ವಾರ್ಡ ನಂ. 38. ಸ್ವತ್ತಿನ ಹಳೇ ನಂ. 38ಬಿ/134, ನಿರ್ದರಣಾ ಸಂಖ್ಯೆ ನಂ. 6 ನೇದನ್ನು ಅದರ ಮಾಲೀಕರಾದ **ಮೊಹಮ್ಮದ ಫಾಜಲ ತಂದೆ ಅಬ್ದುಲವಹಾಬ ಮನಿಯಾರ, ಸಾ: ತಜೀಬ ಲ್ಯಾಂಡ್** ಇವರದ್ದು ಇದ್ದು, ಇವರ ಕಡೆಯಿಂದ ನಮ್ಮ ಪಕ್ಷ ಗಾರರು ಖರೀದಿಗೆ ತೆಗೆದುಕೊಳ್ಳುವವರು ಇರುತ್ತಾರೆ.

ಸದರ ಆಸ್ತಿಯ ಕುರಿತು ಯಾವದೇ ವ್ಯಕ್ತಿ ಅಥವಾ ಸಂಸ್ಥೆಯ ವ್ಯಾಜ್ಯಗಳು ತಂಟೆ ತಕರಾರು ಹಕ್ಕು ಹಿತಸಂಬಂಧ ವಗೈರೆ ಏನಾದೂ ಇದ್ದಲ್ಲಿ ಈ ನೋಟಿಸ್ ಪ್ರಕಟವಾದ ಏಳು(07) ದಿವಸದ ಒಳಗಾಗಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಲೇಖಿ ಮುಖಾಂತರ ತಿಳಿಸತಕ್ಕದ್ದು. ತಿಳಿಸದಿದ್ದಲ್ಲಿ ಸಾರ್ವಜನಿಕರದ್ದು ಯಾರದೂ ತಂಟೆ ತಕರಾರು, ಹಕ್ಕು ವ ಹಿತಾಸಕ್ತಿ, ಬೋಜಾ ವಗೈರೆ ಏನೂ ಇಲ್ಲಾ ಅಂತಾ ಗ್ರಹ